# ಕಂಡೆ ಕರುಣಾನಿಧಿಯ ಗಂಗೆಯ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings are as per book in Ref. 1 above (given without highlights). There are few differences in Ref. 2 with respect to Ref. 1. These differences are marked in green highlights.

ರಾಗ ನಾದನಾಮಕ್ರಿಯೆ ಆದಿ ತಾಳ

ಕಂಡೆ ಕರುಣಾನಿಧಿಯ, ಗಂಗೆಯ
ಮಂಡೆಯೊಳಿಟ್ಟ ದೊರೆಯ, ಶಿವನ || ಪ ||

ರುಂಡಮಾಲೆ ಸಿರಿಯ,
ನೊಸಲೊಳು, ಕೆಂಡಗಣ್ಣಿನ ಬಗೆಯ ಹರನ || ಅಪ ||

ಕಪ್ಪುಗೊರಳ ಹರನ ಕಂ-
ದರ್ಪ ಪಿತನ ಸಖನ, ಮುಪ್ಪುರ ಗೆಲಿದವನ,
ಮುನಿನುತ, ಸರ್ಪ ಭೂಷಣ ಶಿವನ ಹರನ || 1 ||

ಭಸಿತ ಭೂಷಿತ ಶಿವನ,
ಭಕ್ತರ ವಶದೊಳಗಿರುತಿಹನ, ಪಶುಪತಿಯೆನಿಸುವನ,
(ವಸುಧೆಯೊಳ್) (ಧರೆಯೊಳು) ಶಶಿಶೇಖರ ಶಿವನ ಹರನ || 2 ||

ಗಜ ಚರ್ಮಾಂಬರನ,
ಗೌರೀವರ ತ್ರಿಜಗದೀಶ್ವರನ, ತ್ರಿಜಗನ್ಮೋಹಕನ
ತ್ರಿಲೋಚನ (ತ್ರಿಪುರಾಂತಕ ಶಿವನ) (ಭುಜಗ ಕುಂಡಲಧರನ) ಹರನ || 3 ||

ಕಾಮಿತ ಫಲವೀವನ,

ಭಕುತರ (ಪ್ರೇಮದಿ) ಪ್ರೇಮದಿಂ ಸಲಹುವನ, ರಾಮ ನಾಮ ಸ್ಮರನ,
ರತಿಪತಿ ಕಾಮನ (ಸಂಹರನ) (ಗೆಲಿದವನ) ಶಿವನ || 4 ||

ಧರೆಗೆ ದಕ್ಷಿಣ ಕಾಶಿ
(ಎನಿಸುವ) (ಎಂದೆನಿಸುವ) ಪುರ ಪಂಪಾವಾಸಿ, ತಾರಕ ಉಪದೇಶಿ,
ಪುರಂದರ ವಿಠಲ ಭಕ್ತರ ಪೋಷಿ, ಹರನ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ನೊಸಲೊಳು** – ಹಣೆಗಣ್ಣು ಅಗ್ನಿಯೆಂದು ಸೂಚನೆ.

**ಕಪ್ಪುಗೊರಳ** – ವಿಷಕಂಠನಾದುದರಿಂದ.

**ಕಂದರ್ಪ ಪಿತನ** – ಮನ್ಮಥನ ತಂದೆಯಾದ ವಿಷ್ಣುವಿನ.

**ಮುಪ್ಪುರ** – ಮೂರು ಪುರಗಳನ್ನು, ತ್ರಿಪುರವನ್ನು; ತಾರಕಾಸುರನ ಮೂವರು ಮಕ್ಕಳ ಪುರಗಳನ್ನು.

**ತಾರಕ ಉಪದೇಶಿ** – ತಾರಕವೆಂದರೆ ರಾಮನಾಮ; ಅದನ್ನು ಪಾರ್ವತಿಗೆ ಉಪದೇಶ ಮಾಡಿ "ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ" ಎಂದು ಹೊಗಳಿದನೆಂದು ಉಮಾಸಂಹಿತೆ

**ಭುಜಗ ಕುಂಡಲ** = ನಾಗ ಕುಂಡಲ

**ತ್ರಿಜಗನ್ಮೋಹಕನ** = ಮೂರು ಲೋಕಗಳಲ್ಲಿ ತ್ರಿವಿಧ ಜೀವಿಗಳಿಗೆ ಅವರವರ ಗುಣಾನುಸಾರವಾಗಿ ಮೋಹವನ್ನು ಉಂಟುಮಾಡುವವ.

**Classification:** Keerthane
**Ankita:** purandara vittala
**Location:** Hampi, Karnataka State
**Category:** Shiva Stuti
**Group Words:** gange, shiva, runda, kannu, Parvati, bhumi, chandra, uraga, rama, kama, kasha, pampa,
**Pravachana:** NA
**Explanation:** NA